ಆಲ್ ದ ರಜನಿ ಫ್ಯಾನ್ಸ್!

ಡೊಂಟ್ ಮಿಸ್ ದ ಚಾನ್ಸ್!

ಲುಂಗಿ ಡ್ಯಾನ್ಸ್... ಲುಂಗಿ ಡ್ಯಾನ್ಸ್... ಲುಂಗಿ ಡ್ಯಾನ್ಸ್... ಹಾಡು ಹೈ ಸ್ಪೀಡ್‌ನಲ್ಲಿ ಅಬ್ಬರಿಸಿದೊಡನೆ ಲ್ಯಾಂಡ್‌ಮಾರ್ಕ್ ಪುಸ್ತಕದಂಗಡಿಯ ಒಳಗೆ ಹೋಗುತ್ತಿದ್ದವಳು ಏನಿರಬಹುದೆಂದು ನಿಂತು ರೈಲಿಂಗ್ ಹತ್ತಿರಕ್ಕೆ ಬಂದು ಕೆಳಗೆ ಬಾಗಿ ನೋಡಿದೆ. ನನ್ನಂತೆಯೇ ಅನೇಕರು ಎಲ್ಲಾ ಫ್ಲೋರ್‌ಗಳಿಂದ ಕೆಳಕ್ಕೆ ಬಾಗಿ ನೋಡುತ್ತಿದ್ದಾರೆ.

ನೆಲಮಹಡಿಯಲ್ಲಿ ಹತ್ತಕ್ಕೂ ಮೇಲ್ಪಟ್ಟು ಹುಡುಗಿಯರೂ ಹುಡುಗರೂ ಹೆಚ್ಚು ಕಡಿಮೆ ನನ್ನ ಓರಗೆಯವರಷ್ಟೇ ಅಲ್ಲದೆ, ಚಿಕ್ಕವರೂ ದೊಡ್ಡವರೂ ಸಹ ಆ ಹಾಡಿನ ವೇಗಕ್ಕೆ ತಕ್ಕಂತೆ ಲಯಬದ್ಧವಾಗಿ ಹೆಜ್ಜೆ ಹಾಕುತ್ತಿದ್ದಾರೆ. ಫ್ಲಾಷ್ ಮಾಬ್ ಡ್ಯಾನ್ಸ್... ನೆಲಮಹಡಿಯಲ್ಲಿ ಮಾಲ್‌ಗೆ ಬಂದವರು ಈಗಾಗಲೇ ಅವರ ಸುತ್ತಲೂ ಗುಂಪುಗೂಡಿದ್ದಾರೆ.

ಆ ಕಡೆ ಈಕಡೆ ಓಡಾಡುತ್ತಿದ್ದವರಲ್ಲದೆ ಅನೇಕ ಶಾಪ್‌ಗಳಲ್ಲಿದ್ದವರೂ ಸಹ ಮಹಡಿಗಳಿಂದ ಕೆಳಗಿನ ಡ್ಯಾನ್ಸ್‌ಅನ್ನು ನೋಡಲು ಎಸ್ಕಲೇಟರ್‌ನಿಂದ ಕೆಳಕ್ಕಿಳಿಯುತ್ತಿದ್ದಾರೆ. ಕಾಫಿ ಶಾಪ್ಸ್, ರೆಸ್ಟೋರೆಂಟ್‌ಗಳಲ್ಲಿದ್ದವರು ಮಾತ್ರ ತಿನ್ನುವುದು ಕುಡಿಯುವುದನ್ನು ಬಿಟ್ಟು ಬರಲಾರದೆ ಅಲ್ಲಿಂದ ಕದಲಲಿಲ್ಲ. ಅನೇಕ ತರದ ಹಾಡುಗಳು, ಹಾಡಿನ ನಂತರ ಮತ್ತೊಂದು ಹಾಡು, ಚಪ್ಪಾಳೆ, ಶಿಳ್ಳೆ, ಚಿಟಿಕೆಗಳಿಂದ ಪ್ರೇಕ್ಷಕರು ಉತ್ಸುಕರಾಗಿ ಪ್ರತಿಕ್ರಿಯಿಸುತ್ತಿದ್ದರೆ, ಹೈ ಎನರ್ಜಿ ಹಾಡುಗಳು, ಹಾಡಿಗೆ ತಕ್ಕ ಕುಣಿತಗಳಿಂದ ಎಲ್ಲ ಫ್ಲೋರ್‌ಗಳು ಚಾರ್ಜ್ ಆಗುತ್ತಿವೆ. ಬಹಳಷ್ಟು ಜನ ಆ ಡ್ಯಾನ್ಸ್ ಅನ್ನು ತಮ್ಮ ತಮ್ಮ ಸೆಲ್ ಫೋನ್‌ಗಳಲ್ಲಿ ರೆಕಾರ್ಡ್ ಮಾಡಿಕೊಳ್ಳುತ್ತಿದ್ದಾರೆ. ವಿಡಿಯೋ ಕ್ಯಾಮರಾಗಳು ಲೆಕ್ಕವಿಲ್ಲದಷ್ಟಿವೆ.

ನಗರದಲ್ಲಿಯೇ ಅತ್ಯಂತ ದೊಡ್ಡದಾದ ಶಾಪಿಂಗ್ ಮಾಲ್‌ನಲ್ಲಿ ತುಂಬಾ ಬಿಜಿಯಾಗಿರುವ ಈ ಸಮಯದಲ್ಲಿ ಯಾವ ಕಾರಣಕ್ಕಾಗಿ ಈ ಫ್ಲಾಷ್ ಮಾಬ್ ಡ್ಯಾನ್ಸ್... ಅಂದುಕೊಳ್ಳುತ್ತಿದ್ದಂತೆ ಸುತ್ತಲೂ ಇದ್ದವರ ಗಮನ ತಮ್ಮ ಕಡೆಗಿದೆಯೆಂದು

ಚಿತ್ರಗಳು: ಪರಮೇಶ ಜೋಳದ್

